ಸಹಿತ ನನಗೆ ಬಹಳ ಸಂತೋಷವಾಗಿದೆ. ಇದನ್ನು ೧೯೮೭-೮೮ರ ಆಯವ್ಯಯ ಪಟ್ಟಿಯಲ್ಲಿ ಸೇರಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ, ಇದರಿಂದ ನನಗೆ ಬಹಳ ವಿಷಾದವಾಗಿದೆ. ಬರೇ ಪ್ರಯತ್ನ ಮಾಡುವುದು ಬೇಡ. ಮಾನ್ಯ ಸಚಿವರು ರಾಣೆಬೆನ್ನೂರು ನಗರಕ್ಕೆ ಬಂದಾಗ ಅಲ್ಲಿಯ ಜನರಿಗೆ ಒಂದು ಆಶ್ವಾಸನೆಯ ಮಾತನ್ನು ಕೊಟ್ಟು ಬಂದಿದ್ದಾರೆ. ಇಂತಹ ಕಲುಷಿತ ನೀರನ್ನು ಸುಮಾರು ೮೦ ಸಾವಿರ ಜನರು ಕಳೆದ ೨೦ ವರ್ಷಗಳಿಂದ ಕುಡಿಯುತ್ತಿದ್ದಾರೆ. ಆದುದರಿಂದ ದಯವಿಟ್ಟು ಈ ವರ್ಷದ ಆಯವ್ಯಯ ಪಟ್ಟಿಯಲ್ಲಿ ಇದನ್ನು ಸೇರಿಸಿ ಜನತೆಗೆ ಏನು ಒಂದು ತೊಂದರೆ ಇದೆ ಅದನ್ನು ನಿವಾರಣೆ ಮಾಡಬೇಕೆಂದು ತಮ್ಮ ಮುಖಾಂತರ ಕಳಕಳಿಯಿಂದ ಸರಕಾರವನ್ನು ಒತ್ತಾಯಪಡಿಸುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ, ಪ್ರಯತ್ನ ಮಾಡುತ್ತೇನೆ, ಇಷ್ಟು ಮಾತ್ರ ನಾನು ಹೇಳಬಲ್ಲೆ. ಇದಕ್ಕೆ ನಾಲ್ಕು ಕೋಟಿಗಿಂತಲೂ ಜಾಸ್ತಿ ಹಣ ಖರ್ಚಾಗುವುದಿದೆ. ಈಗಿರುವ ಅಂದಾಜಿನ ಪ್ರಕಾರ ನಾಲ್ಕು ಕೋಟಿ ಆಗುತ್ತದೆ. ಹಣದ ತೊಂದರೆಯನ್ನು ಗಮನದಲ್ಲಿಟ್ಟುಕೊಂಡು ಈ ಮಾತನ್ನು ಹೇಳುತ್ತಿದ್ದೇನೆ. ಹಣ ಸಿಗತಕ್ಕಂಥ ಸನ್ನಿವೇಶ ಇದ್ದರೆ ಈಗಿನ ಆಯವ್ಯಯ ಪಟ್ಟಿಯಲ್ಲೇ ಇದನ್ನು ಸೇರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ. ಬಿ. ಕೋಳಿವಾಡ್.—ಅಧ್ಯಕ್ಷರೇ, ಈ ೧೦೬ ಲಕ್ಷ ರೂಪಾಯಿಗಳನ್ನು ಒಂದೇ ವರ್ಷದಲ್ಲಿ ಖರ್ಚು ಮಾಡಬೇಕಾದ ಪರಿಸ್ಥಿತಿ ಏನೂ ಬರುವುದಿಲ್ಲ. ಈ ವರ್ಷ ಪ್ರಾರಂಭ ಮಾಡಲಿ, ಅಲ್ಪಸ್ವಲ್ಪ ಹಣ ಕೊಟ್ಟು ಅಂದರೆ, ೪ ಲಕ್ಷ, ೧೦ ಲಕ್ಷ ಕೊಟ್ಟು ಪ್ರಾರಂಭ ಮಾಡಿದರೆ, ಮುಂದಿನ ವರ್ಷ, ಅದರ ಮುಂದಿನ ವರ್ಷ ಕೆಲಸವನ್ನು ಮುಂದುವರಿಸಿಕೊಂಡು ಹೋಗುವುದಾಗುತ್ತದೆ ಎಂಬ ದೃಷ್ಟಿಯಿಂದ, ತಮ್ಮ ಮುಖೇನ, ಬಹಳ ಕಳಕಳಿಯಿಂದ, ಒತ್ತಾಯಪೂರ್ವಕವಾಗಿ, ಈ ವರ್ಷದ ಆಯವ್ಯಯ ಪಟ್ಟಿಯಲ್ಲೇ ಇದನ್ನು ಸೇರಿಸಿ, ಕೆಲವೊಂದು ಹಣವನ್ನಾದರೂ ತೆಗೆದಿಟ್ಟು ಕೆಲಸ ಪ್ರಾರಂಭ ಮಾಡಬೇಕೆಂದು ಪುನಃ ಪುನಃ ಒತ್ತಾಯಪೂರ್ವಕವಾಗಿ ಮಾನ್ಯ ಸಚಿವರನ್ನು ಕೇಳಿಕೊಳ್ಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಸುಳ್ಳು ಆಶ್ವಾಸನೆ ಅಂದರೆ ಸತ್ಯಕ್ಕೆ ದೂರವಾದ ಆಶ್ವಾಸನೆ ಕೊಡುವುದಕ್ಕೆ ನನಗೆ ಇಷ್ಟ ಇಲ್ಲ. ಪ್ರಾಗ್ಮಾಟಿಕ್ ಆಗಿ ಇದನ್ನು ನೋಡಬೇಕು. ಸನ್ಮಾನ್ಯ ಅಧ್ಯಕ್ಷರೇ, ಒಟ್ಟು ನೀರು ಪೂರೈಕೆ ಯೋಜನೆಗಳಿಗಾಗಿ ೧೯೮೭-೮೮ರಲ್ಲಿ ಇಷ್ಟು ಕೋಟಿ ಹಣ ಎಂದು ನಿಗದಿ ಮಾಡುತ್ತಾರೆ. ಈ ಒಂದು ನಿಗದಿಯಾದ ಹಣದ ವ್ಯಾಪ್ತಿಯಲ್ಲಿ ಇದನ್ನು ಸೇರಿಸಿಕೊಳ್ಳುವುದಕ್ಕೆ ಆಗುತ್ತದೋ ಇಲ್ಲವೋ ಎಂಬುದನ್ನು ನೋಡಿಕೊಂಡು, ಪ್ರಯತ್ನ ಮಾಡುತ್ತೇನೆ ಎಂದು ಹೇಳಿದ್ದೇನೆ. ಇಷ್ಟನ್ನು ಬಿಟ್ಟರೆ, ಜಾಸ್ತಿ ಹೇಳಿದರೆ ನಾನು ಮಾತಿಗೆ ತಪ್ಪಿದಂತೆ ನಡೆದುಕೊಂಡಹಾಗೆ ಆಗುತ್ತದೆಂಬ ತೊಂದರೆ ನನಗೆ ಇದೆ. ಆದುದರಿಂದ ಇಷ್ಟನ್ನು ಹೇಳಿದ್ದೇನೆ. ಪ್ರಯತ್ನ ಮಾಡುತ್ತೇನೆ, ಸಹಾನುಭೂತಿಯಿಂದ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು.—ಈಗ ಆಬ್ಸೆಂಟ್ ಇದ್ದವರನ್ನು ಮತ್ತೊಮ್ಮೆ ಕರೆಯುತ್ತೇನೆ.

ಚಂದ್ರಶೇಖರ ಮಾವಜಿ.— ಆಬ್ಸೆಂಟ್.

ಎ. ಎಂ. ಹಿಂದಸಗೇರಿ.— ಆಬ್ಸೆಂಟ್.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳ ಪಟ್ಟಿ

ಸರಕಾರಿ ಯೋಜನೆಗಳನ್ನು ಜಾರಿಗೊಳಿಸುವಲ್ಲಿ ವಿಳಂಬ

೬೪ (೨೯೪) ಶ್ರೀ ಚಂದ್ರಶೇಖರ ಮಾವಜಿ (ಪರಸಗಡ).—ಮಾನ್ಯ ಗ್ರಾಮೀಣಾಭಿವೃದ್ಧಿ, ವಸತಿ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಉಪವಿಭಾಗ ಮಟ್ಟದಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಧಿಕಾರಿಯಂತಹ, ಜನಸಾಮಾನ್ಯರಿಗೆ ಹೆಚ್ಚು ಕಾರ್ಯಾಲಯವಿದ್ದು ಸರಕಾರದ ವಿವಿಧ ಯೋಜನೆಗಳಾದ ಎನ್. ಆರ್. ಡಬ್ಲ್ಯೂ. ಎಸ್., ಎ. ಆರ್. ಡಬ್ಲ್ಯೂ. ಎಸ್., ಸಣ್ಣ ನೀರು ಸರಬರಾಜು, ಕೊರೆದ ಬಾವಿಗಳನ್ನು ಹೊಸುವುದು ಮುಂತಾದುವುಗಳನ್ನು ಅನುಷ್ಠಾನಕ್ಕೆ ತರುವಲ್ಲಿ ವಿಳಂಬದ ಬಗ್ಗೆ ಸರಕಾರದವ್ವರ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಮೇಲ್ಕಂಡ ಯೋಜನೆಗಳನ್ನು ತೀವ್ರಗತಿಯಲ್ಲಿ ಅನುಷ್ಠಾನಕ್ಕೆ ತರುವುದ ಕ್ಕೋಸ್ಕರ ತಾಲ್ಲೂಕುವಾರು ಪ್ರತ್ಯೇಕ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರವರ ಜನಾರೋಗ್ಯ ಶಿಲ್ಪ ಕಾರ್ಯಾಲಯಗಳನ್ನು ತೆಗೆಯುವ ವಿಚಾರ ಸರಕಾರದವರ ಗಮನಕ್ಕೆ ಬಂದಿದೆಯೇ?

ಇ) ಸವದತ್ತಿ ತಾಲ್ಲೂಕಿಗೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರವರ ಜನಾರೋಗ್ಯ ಶಿಲ್ಪಕಾರ್ಯ ಪ್ರಾರಂಭಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ, ಪಸತಿ ಮತ್ತು ವಕ್ಫ್ ಮಂತ್ರಿಗಳು).—

ಆ) ಉಪವಿಭಾಗ ಮಟ್ಟದಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ. ಜನಾರೋಗ್ಯ ಶಿಲ್ಪಕಾರ್ಯಾಲಯವಿರುವುದರಿಂದ ವಿವಿಧ ಯೋಜನೆಗಳನ್ನು ಅನುಷ್ಠಾನಕ್ಕೆ ತರುವಲ್ಲಿ ಸಾಮಾನ್ಯವಾಗಿ ವಿಳಂಬವಾಗಿರುವುದಿಲ್ಲ.

ಆ) ಇಂತಹ ಪ್ರಸ್ತಾಪನೆ ಸದ್ಯದಲ್ಲಿ ಇಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಕಾಮಗಾರಿಗಳು ನಡೆಯದೆ ಇರುವುದು

೭೬ (೩೩೬) ಶ್ರೀ ವಿ. ಎಂ. ಹಿಂದುಸಗೇರಿ (ಹುಬ್ಬಳ್ಳಿ).—ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳ, ಆಹಾರ ಹಾಗೂ ನಾಗರೀಕ ಸರಬರಾಜು ಹಾಗೂ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಹುಬ್ಬಳ್ಳಿ-ಧಾರವಾಡ ನಗರಸಭೆ ಪ್ರದೇಶದಲ್ಲಿ ನೀರಿನ ಕೊಳವೆಗಳ ಮತ್ತು ಜಲ ಸಂಗ್ರಹಾಗಾರಗಳ ನಿರ್ಮಾಣದ ಕೆಲಸಕ್ಕಾಗಿ ಜೀವವಿಮಾ ನಿಗಮವು ೭.೦೦ ಕೋಟಿ ರೂ.ಗಳ ಸಾಲ ಕೊಡಲು ಒಪ್ಪಿದ್ದು ನಿಜವೆ?

ಆ) ಕೆಲಸ ಕಾರ್ಯಗತ ಮಾಡಲು ಜೀವವಿಮಾ ನಿಗಮವು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಗೆ ೧.೦೦ ಕೋಟಿ ರೂ. ಗಳನ್ನು ಬಿಡುಗಡೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಇ) ಹಾಗಿದ್ದಲ್ಲಿ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯು ಕೆಲಸ ಕಾರ್ಯಗತ ಮಾಡಲು ಪ್ರಾರಂಭ ಮಾಡಿದೆಯೆ? ಇಲ್ಲದಿದ್ದಲ್ಲಿ ಕೆಲಸ ಕೈಗೊಳ್ಳಲು ತಡ ವಾಗಲು ಕಾರಣವೇನು?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳ ಆಹಾರ ಹಾಗೂ ನಾಗರೀಕ ಮಂತ್ರಿಗಳು).—

ಅ) ಇಲ್ಲ.

ಆ) ಬಂದಿದೆ.

ಇ) ಕೆಲಸಗಳು ಪ್ರಾರಂಭವಾಗಿವೆ.

ಚುಂಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ನಗರಾಭಿವೃದ್ಧಿ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ. ಉತ್ತರದ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ಸ್ವಾಭಾವಿಕ ನೀರಿನ ಉಗಮದ ಉಪಯೋಗದ ಬಗ್ಗೆ

೮೬ (೨೩೩೬) ಶ್ರೀ ಐ. ಬಿ. ಶಂಕರ್ (ಚಿತ್ರದುರ್ಗ). —ಮಾನ್ಯ ಗ್ರಾಮೀಣ ಅಭಿವೃದ್ಧಿ, ವಸತಿ, ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:

ಅ) ಚಿತ್ರದುರ್ಗ ತಾಲ್ಲೂಕಿನಲ್ಲಿ ಸಿಗುವ ಸ್ವಾಭಾವಿಕ ನೀರಿನ ಉಪಯೋಗ ಹೇಗೆಯಾಗುತ್ತಿದೆಯೆ?